# ಜೀವನಪ್ರೀತಿ ಜಿನುಗಿ ಕಾವ್ಯವಾಗಿ ಬದುಕಾಗಿ

ಕಾವ್ಯವನ್ನು ಸೃಜಿಸುವುದು ಮಾತ್ರವಲ್ಲ, ಬದುಕನ್ನೇ ಕಾವ್ಯವನ್ನಾಗಿಸಿಕೊಂಡವರು ಸಿದ್ಧಲಿಂಗ ಪಟ್ಟಣಶೆಟ್ಟಿ. ಈ ಕಾವ್ಯಚಿಂತಾಮಣಿಗೀಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ.



**ಚನ್ನಪ್ಪ ಅಂಗಡಿ**

ಚಿತ್ರಗಳು : ಬಿ.ಎಂ. ಕೇದಾರನಾಥ

ಸಿದ್ಧಲಿಂಗ ಪಟ್ಟಣಶೆಟ್ಟಿ ಅವರಿಗೀಗ 86 ವರ್ಷ. ಅವರ ಕಾವ್ಯಯಾನಕ್ಕೆ ಭರ್ತಿ 60 ವರ್ಷ. ಚೊಚ್ಚಿಲ ಕವನ ಸಂಕಲನ 'ನೀನಾ' (1964) ಪ್ರಕಟಗೊಂಡು ಅರವತ್ತು ವರ್ಷಗಳು ತುಂಬಿದ್ದರೂ, ಈಗಲೂ ಚೊಚ್ಚಿಲ ಸಂಕಲನದಲ್ಲಿನ ಉತ್ಸಾಹ ಹಾಗೂ ಜೀವನಪ್ರೀತಿ ಪಟ್ಟಣಶೆಟ್ಟರ ಕವಿತೆ ಹಾಗೂ ಬದುಕಿನಲ್ಲಿ ಕೊಂಚವೂ ಕಳೆಗುಂದಿಲ್ಲ. ಜೀವನಪ್ರೀತಿಯೇ ಕವಿತೆಯಾಗಿ ಬದುಕಾಗಿ ಮೈದಳೆದಂತಿರುವ ಕವಿಗೆ ಈಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪುರಸ್ಕಾರದ ಗೌರವ. ಈ ಪುರಸ್ಕಾರದ ನೆಪದಲ್ಲಿ ಹಿಂತಿರುಗಿ ನೋಡಿದರೆ ಕವಿಯ ಬದುಕೇ ಒಂದು ಕಾವ್ಯದಂತೆ ನಮ್ಮ ಕಣ್ಣೆದುರು ನಿಲ್ಲುತ್ತದೆ.

ತನ್ನನ್ನು ತಾನು 'ಗಿರಿಜವ್ವನ ಮಗ' ಎಂದು ಕರೆದುಕೊಳ್ಳುವುದರಲ್ಲಿ ಕವಿಗೆ ಹೆಚ್ಚಿನ ಖುಷಿ. ಈ ಗಿರಿಜವ್ವನ ಮಗ ಬಾಯಿಯಲ್ಲಿ ಬೆಳ್ಳಿ ಚಮಚವನ್ನು ಇಟ್ಟುಕೊಂಡೇನೂ ಹುಟ್ಟಲಿಲ್ಲ. ಹುಟ್ಟುತ್ತಲೇ ಸವಾಲಾದ ಬದುಕು ಸಿದ್ಧಲಿಂಗನನ್ನು ಕಲ್ಲಿಗೆ ಹತ್ತಿ, ಮುಳ್ಳಿಗೆ ಹತ್ತಿ, ಈಗ ಹೂವಿಗೆ ತಂದು ನಿಲ್ಲಿಸಿದೆ. ಕವಿಯ ಬದುಕು ಹೂವಿಗೆ ಬಂದು ಮುಟ್ಟಿದೆ ಎನ್ನುವುದಕ್ಕಿಂತಲೂ ಕವಿಯೇ ಹೂವಾಗಿ ರೂಪಾಂತರವಾಗಿದ್ದಾರೆ ಎನ್ನುವುದೇ ಹೆಚ್ಚು ಸರಿ.

1939ರ ನವೆಂಬರ್ 3ರಂದು ಧಾರವಾಡ ಬಳಿಯ ಯಾದವಾಡದಲ್ಲಿ ಜನಿಸಿದ ಸಿದ್ಧಲಿಂಗ ಪಟ್ಟಣಶೆಟ್ಟರು, ಅತ್ಯಂತ ಎಳವೆಯಲ್ಲಿ ನಡೆದ ಘಟನೆಗಳನ್ನು ಕಣ್ಣಮುಂದೆ ಕಟ್ಟಿದಂತೆ ಹೇಳುವ ಸಾಮರ್ಥ್ಯವನ್ನು ಪಡೆದಿದ್ದಾರೆ. ಸಣ್ಣ ಸಣ್ಣ ಸಂಗತಿಗಳನ್ನು ತಮ್ಮ ಸ್ಮೃತಿ ಪಟಲದ ಮೇಲೆ ಜತನದಿಂದ ಕಾಯ್ದುಕೊಂಡು ಬಂದಿದ್ದಾರೆ. ತಮ್ಮ ಮೂರನೇ ವರ್ಷದಲ್ಲಿ ನಡೆದ ತಂದೆಯ ಅಂತ್ಯಕ್ರಿಯೆಯ ಕೆಲವು ದೃಶ್ಯಗಳನ್ನು ಇದುವರೆಗೂ ಮನಸ್ಸಿನಲ್ಲಿ ಹಸಿಹಸಿಯಾಗಿ ಉಳಿಸಿಕೊಂಡಿದ್ದಾರೆ. ತಂದೆಯ ಕುರಿತಾದ ನೆನಪನ್ನು ಉಳಿಸಿಕೊಳ್ಳಲೇಬೇಕೆಂಬ ಛಲದಿಂದ, ಅಪ್ಪನ ಹೆಣ ಹೊತ್ತು ಸಿದಿಗೆ ಸಾಗಿದ್ದು, ದಾರಿಯಲ್ಲಿ ಹಡದಿ ಹಾಸಿದ್ದು, ಹಮಾಲ ಪರುತಪ್ಪ ಇವರನ್ನು ಹೆಗಲ ಮೇಲೆ ಹೊತ್ತು ನಡೆದದ್ದು, ಸ್ಮಶಾನದಲ್ಲಿ ಹೆಣವನ್ನು ಕುಣಿಗೆ ಇಳಿಸಿದ್ದು... ಅವರ ನೆನಪುಗಳ ಸಂಗ್ರಹದ ಚಿತ್ರಪುಟ ಶುರುವಾಗುವುದೇ ಅಪ್ಪನ ಹೆಣದ ಮೆರವಣಿಗೆಯಿಂದ. ಆ ನೆನಪು ಅವರ ಜೀವನದುದ್ದಕ್ಕೂ ಬೂದಿಯೊಳಗಿನ ಕಾವಿನಂತೆ ಉಳಿದುಕೊಂಡು ಬಂದಿದೆ.

ಅವರ ನೆನಪುಗಳ ಶಕ್ತಿಮೂಲವೆಂದರೆ ಮೊದಲಿನಿಂದಲೂ ರೂಢಿಗತವಾಗಿರುವ ದಿನಚರಿ ಬರೆಯುವ ಹವ್ಯಾಸ. ಶುರುವಾತಿನಿಂದ ಡೈರಿ